# ಉಪನಿರ್ದೇಶಕರು (ಗ್ರಾ.ಕೈ) ಜಿಲ್ಲಾ ಪಂಚಾಯತ್, ಕೈಗಾರಿಕಾ ವಿಭಾಗ, ಹಾಸನ.

ಸಂ: ಜಿಪಂಹಾ/ಉನಿ(ಗ್ರಾ.ಕೈ)/ಎ1ಅ.ಸೂ/2026–27. ದಿನಾಂಕ:–23–07–2026.

–: ಅಧಿಸೂಚನೆ :–

ಉಪನಿರ್ದೇಶಕರು (ಗ್ರಾ.ಕೈ) ಜಿಲ್ಲಾ ಪಂಚಾಯತ್, ಕೈಗಾರಿಕಾ ವಿಭಾಗ, ಹಾಸನ ರವರ ಕಛೇರಿ ವತಿಯಿಂದ 2026–27 ನೇ ಸಾಲಿನ ವೃತ್ತಿಪರ ಕುಶಲಕರ್ಮಿಗಳ ಯೋಜನೆಯಡಿ ಈ ಕೆಳಕಂಡಂತೆ ವೃತ್ತಿ ನಿರ್ವಹಿಸುತ್ತಿರುವ ಕುಶಲಕರ್ಮಿಗಳಿಂದ ಅರ್ಜಿಗಳನ್ನು **ದಿನಾಂಕ: 25–07–2026 ರಿಂದ 15–09–2026** ರ ವರೆಗೆ ವೆಬ್ ಸೈಟ್ www.hassan.nic.in ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ | ಕಾರ್ಯಕ್ರಮಗಳ ವಿವರ | ಉಪಕರಣಗಳು | ಗುರಿ |
|---|---|---|---|
| 1 | 2851–00–107–0–32<br>ವೃತ್ತಿ ನಿರತ ಕುಶಲ ಕರ್ಮಿಗಳಿಗೆ ಸುದಾರಿತ ಉಪಕರಣಗಳ ವಿತರಣೆ ಯೋಜನೆ | ವಿದ್ಯುತ್ ಚಾಲಿತ ಹೊಲಿಗೆಯಂತ್ರಗಳು | 250 |
| | | ಮರಗೆಲಸ | 640 |
| | | ಗಾರೆಕೆಲಸ | |
| | | ದೋಬಿ | |
| | | ಕ್ಷೌರಿಕ | |
| | | ಎಲೆಕ್ಟ್ರಿಕಲ್ ಟೂಲ್‌ಕಿಟ್ | |
| | | ಬೋರ್‌ವೆಲ್ ರಿಪೇರಿ/ಮೋಟರ್ ರಿ ವೈಂಡಿಂಗ್ | |

ಅರ್ಹತೆಗಳು:

- ಒಂದು ಕುಟುಂಬಕ್ಕೆ ಒಂದೇ ಅರ್ಜಿಯನ್ನು ಸಲ್ಲಿಸತಕ್ಕದ್ದು.
- **ವಿದ್ಯುತ್ ಚಾಲಿತ ಹೊಲಿಗೆಯಂತ್ರ, ಮರಗೆಲಸ, ಗಾರೆಕೆಲಸ, ದೋಬಿ, ಕ್ಷೌರಿಕ, ಎಲೆಕ್ಟ್ರಿಕಲ್ ಟೂಲ್‌ಕಿಟ್, ಹಾಗೂ ಬೋರ್‌ವೆಲ್ ರಿಪೇರಿ/ಮೋಟರ್ ರಿ ವೈಂಡಿಂಗ್ ಉಪಕರಣಗಳನ್ನು** ಪಡೆಯುವುದಕ್ಕಾಗಿ ಹಾಸನ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ವಾಸವಿರುವ ಕುಶಲಕರ್ಮಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.
- ವಿದ್ಯುತ್ ಚಾಲಿತ ಹೊಲಿಗೆಯಂತ್ರ, ಮರಗೆಲಸ, ಗಾರೆಕೆಲಸ, ಎಲೆಕ್ಟ್ರಿಕಲ್ ಟೂಲ್‌ಕಿಟ್, ವಿದ್ಯುತ್ ಚಾಲಿತ ಹೊಲಿಗೆಯಂತ್ರ ಹಾಗೂ ಬೋರ್‌ವೆಲ್ ರಿಪೇರಿ/ಮೋಟರ್ ರಿ ವೈಂಡಿಂಗ್ ಉಪಕರಣಗಳನ್ನು ಪಡೆಯುವುದಕ್ಕಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಯ **ವಯಸ್ಸು ಕನಿಷ್ಠ 18 ವರ್ಷ ಹಾಗೂ ಗರಿಷ್ಠ 55 ವರ್ಷಗಳು** ಇರತಕ್ಕದ್ದು.
- ಸರ್ಕಾರಿ ನೌಕರರು ಅಥವಾ ಅವರ ಅವಲಂಬಿತರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
- ಆನ್‌ಲೈನ್‌ನಲ್ಲಿ www.hassan.nic.in ವೆಬ್‌ಸೈಟ್ ಮುಖಾಂತರ ಅವಶ್ಯ ಮಾಹಿತಿ ಭರ್ತಿ ಮಾಡಿ ಮತ್ತು ಸಂಬಂಧಿಸಿದ ದಾಖಲೆಗಳ ಸ್ವಯಂ ದೃಢೀಕೃತ ಪ್ರತಿಗಳನ್ನು ಅಪ್ಲೋಡ್ ಮಾಡುವ ಮೂಲಕ ನಿಗದಿತ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸುವುದು.

ಈ ಅರ್ಜಿಯೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ನೀಡುವುದು.

1) ಪಾಸ್ಪೋರ್ಟ್ ಗಾತ್ರದ ಭಾವಚಿತ್ರ.
2) ಜನ್ಮ ದಿನಾಂಕ ನಮೂದಿಸಿರುವ ದಾಖಲೆ (ವರ್ಗಾವಣೆ ಪ್ರಮಾಣ ಪತ್ರ/ಎಸ್.ಎಸ್.ಎಲ್.ಸಿ., ಅಂಕಪಟ್ಟಿ/ ಇನ್ನಿತರ ಪ್ರಮಾಣ ಪತ್ರ)
3) ಜಾತಿ ಪ್ರಮಾಣ ಪತ್ರ.
4) ಬಿ.ಪಿ.ಎಲ್./ಎ.ಪಿ.ಎಲ್. ಪಡಿತರ ಚೀಟಿ.
5) ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಂದ ವೃತ್ತಿ ಮಾಡುತ್ತಿರುವ ಬಗ್ಗೆ ದೃಢೀಕರಣ ಪತ್ರ/ಕಾರ್ಮಿಕ ಇಲಾಖೆಯಿಂದ ಕಾರ್ಮಿಕ ಪ್ರಮಾಣ ಪತ್ರ/ಯಾವುದೇ ಸರ್ಕಾರಿ ಸಂಸ್ಥೆಗಳಿಂದ ತರಬೇತಿ ಪಡೆದಿದ್ದರೆ ತರಬೇತಿ ಪ್ರಮಾಣ ಪತ್ರ. (ಟೈಲರಿಂಗ್, ಮರಗೆಲಸ, ಗಾರೆಕೆಲಸ, ದೋಬಿ, ಕ್ಷೌರಿಕ, ಎಲೆಕ್ಟ್ರಿಕಲ್ ರಿಪೇರಿ, ಬೋರ್‌ವೆಲ್ ರಿಪೇರಿ/ಮೋಟರ್ ರಿ ವೈಂಡಿಂಗ್).
6) ವಿಕಲಚೇತನರ ಪ್ರಮಾಣ ಪತ್ರ (ಅನ್ವಯವಾದಲ್ಲಿ).
7) ಮಾಜಿ ಸೈನಿಕರ ಪ್ರಮಾಣ ಪತ್ರ (ಅನ್ವಯವಾದಲ್ಲಿ).

- ತಾಲ್ಲೂಕುವಾರು ಹಾಗೂ ಪ್ರವರ್ಗವಾರು ಗುರಿಯನ್ನು ನಿಗದಿಪಡಿಸಿಕೊಳ್ಳಲಾಗುವುದು.
- **ಆಯ್ಕೆ ಪ್ರಕ್ರಿಯೆ:** ನಿಗದಿಪಡಿಸಿರುವ ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತವಾಗಿದ್ದಲ್ಲಿ, ಲಾಟರಿ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು(ಗ್ರಾಮೀಣ ಕೈಗಾರಿಕೆ) ರವರ ಕಛೇರಿ, ಜಿಲ್ಲಾ ಪಂಚಾಯತ್, ಕೈಗಾರಿಕಾ ವಿಭಾಗ, ಜಿಲ್ಲಾ ಕೈಗಾರಿಕಾ ಕೇಂದ್ರ ಕಛೇರಿ ಕಟ್ಟಡ, ಡೈರಿ ಸರ್ಕಲ್, ಹಾಸನ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ: 08172–240651.

ಉಪ ನಿರ್ದೇಶಕರು (ಗ್ರಾ.ಕೈ)
ಜಿಲ್ಲಾ ಪಂಚಾಯತ್ ಕೈಗಾರಿಕಾ ವಿಭಾಗ

ಉಪನಿರ್ದೇಶಕರು(ಗ್ರಾ.ಕೈ)
ಜಿಲ್ಲಾ ಪಂಚಾಯತ್, ಕೈಗಾರಿಕಾ ವಿಭಾಗ,
ಹಾಸನ.